# ಸ್ಥಳೀಯ ಸಂಸ್ಥೆ ಚುನಾವಣೆಗಳಿಗೆ ಕಾಂಗ್ರೆಸ್ ಸಜ್ಜು, ಬ್ಲಾಕ್-ಬೂತ್ ಮಟ್ಟದಲ್ಲಿ ಸಂಘಟನೆ ಬಲಪಡಿಸಿ - ಸಚಿವ ಯು.ಟಿ. ಖಾದರ್




ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಬ್ಲಾಕ್ ಹಾಗೂ ಬೂತ್ ಮಟ್ಟದಿಂದಲೇ ಮತ್ತಷ್ಟು ಬಲಪಡಿಸಿ ಚುನಾವಣೆಗೆ ಸಜ್ಜಾಗಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ಯು.ಟಿ. ಖಾದರ್ ಅವರು ಕರೆ ನೀಡಿದರು. ನಗರದ ಮಲ್ಲಿಕಟ್ಟೆಯ ಕಾಂಗ್ರೆಸ್ ಭವನದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಸಾಮಾನ್ಯ ಸಭೆಯಲ್ಲಿ ಮುಖಂಡರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಜಿಲ್ಲಾ ಕಾಂಗ್ರೆಸ್‌ನ ಮುಂಚೂಣಿ ಘಟಕಗಳಾದ ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್, ಸೇವಾದಳ ಹಾಗೂ ಎನ್‌ಎಸ್‌ಯುಐ ವತಿಯಿಂದ ಪ್ರತ್ಯೇಕ ಜಿಲ್ಲಾ ಮಟ್ಟದ ಸಮಾವೇಶಗಳನ್ನು ಆಯೋಜಿಸಿ, ಅವುಗಳ ಚಟುವಟಿಕೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸಬೇಕು ಎಂದು ಖಾದರ್ ಸೂಚಿಸಿದರು. ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸಿ 2028ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲಾ 8 ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಸಂಘಟಿತವಾಗಿ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಮತದಾರರ ಅಂತಿಮ ಪಟ್ಟಿಯಲ್ಲಿ ಅರ್ಹ ಮತದಾರರ ಹೆಸರು ಯಾವುದೇ ಕಾರಣಕ್ಕೂ ಕೈತಪ್ಪದಂತೆ ಎಚ್ಚರ ವಹಿಸಬೇಕು. ಈ ನಿಟ್ಟಿನಲ್ಲಿ ಬೂತ್ ಮಟ್ಟದಲ್ಲಿ ಕಡ್ಡಾಯವಾಗಿ ಮತದಾರರ ಪಟ್ಟಿಯನ್ನು ಪರಿಶೀಲಿಸಬೇಕು ಎಂದು ಸೂಚಿಸಿದರು. ಜಿಲ್ಲೆಯಲ್ಲಿ ನಡೆದ ಸಚಿವ ಸಂಪುಟದ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ತಿಳಿಸಿದ ಖಾದರ್, ಕಾರ್ಯಕರ್ತರೊಂದಿಗೆ ನಿರಂತರ ಸಂಪರ್ಕದಲ್ಲಿರುವ ಉದ್ದೇಶದಿಂದ ತಿಂಗಳಿಗೆ ಎರಡು ಬಾರಿ ಜಿಲ್ಲಾ ಕಾಂಗ್ರೆಸ್ ಭವನಕ್ಕೆ ಭೇಟಿ ನೀಡಿ ಕಾರ್ಯಕರ್ತರ ಅಹವಾಲುಗಳನ್ನು ಸ್ವೀಕರಿಸಿ, ಸಮಸ್ಯೆಗಳಿಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು.

**ಸಂಘಟನೆ ಬಲಪಡಿಸಲು ಅಗತ್ಯ ಸಿದ್ಧತೆ - ಪದ್ಮರಾಜ್ ಪೂಜಾರಿ**

ಸಭೆಯ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪದ್ಮರಾಜ್ ಆರ್. ಪೂಜಾರಿ, ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಇನ್ನಷ್ಟು ಬಲಪಡಿಸಿ ಕಾರ್ಯಕರ್ತರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಮುಂಬರುವ ಚುನಾವಣೆಗಳನ್ನು ಎದುರಿಸಲು ಅಗತ್ಯ ಸಿದ್ಧತೆ ನಡೆಸಲಾಗುವುದು ಎಂದು ಹೇಳಿದರು.

ಮಂಗಳೂರಿನಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ 32,611 ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆ ನೀಡಿರುವುದು ಹಾಗೂ ತುಳು ಭಾಷೆಯನ್ನು ರಾಜ್ಯದ ಎರಡನೇ ಹೆಚ್ಚುವರಿ ಅಧಿಕೃತ ಆಡಳಿತ ಭಾಷೆಯನ್ನಾಗಿಸಲು ತೀರ್ಮಾನ ಕೈಗೊಂಡಿರುವುದನ್ನು ಸಭೆಯಲ್ಲಿ ಅಭಿನಂದಿಸಲಾಯಿತು.

ಜಿಲ್ಲೆಯಲ್ಲಿ ಖಾಲಿಯಿರುವ ವಿವಿಧ ನಿಗಮ ಹಾಗೂ ಮಂಡಳಿಗಳಿಗೆ ಪಕ್ಷದ ಕಾರ್ಯಕರ್ತರನ್ನು ಶೀಘ್ರದಲ್ಲಿ ನಾಮನಿರ್ದೇಶನಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನೂ ಸಭೆಯಲ್ಲಿ ಕೈಗೊಳ್ಳಲಾಯಿತು.

ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಮಾಜಿ ಶಾಸಕ ಜೆ.ಆರ್. ಲೋಬೊ, ಜಿಲ್ಲಾ ಕಾಂಗ್ರೆಸ್ ನಿಕಟಪೂರ್ವ ಅಧ್ಯಕ್ಷ ಕೆ. ಹರೀಶ್ ಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಇನಾಯತ್ ಅಲಿ, ಮಿಥುನ್ ರೈ, ರಕ್ಷಿತ್ ಶಿವರಾಂ, ಎಂ.ಎಸ್. ಮಹಮ್ಮದ್, ಸೃಜನ್ ಸಂಥನ್, ಜಿಲ್ಲಾ ವೀಕ್ಷಕರಾದ ಡಾ. ಅಂಶುಮಾನ್ಯಾಥ್, ಸತೀಶ್, ಸದಾಶಿವ, ಮೂಡ ಅಧ್ಯಕ್ಷ ಸಂತೋಷ್ ಶೆಟ್ಟಿ ಸೇರಿದಂತೆ ಡಿಸಿಸಿ ಪದಾಧಿಕಾರಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಜಿಲ್ಲಾ ಮುಂಚೂಣಿ ಘಟಕಗಳ ಅಧ್ಯಕ್ಷರು ಹಾಗೂ ಕೆಪಿಸಿಸಿ ಸದಸ್ಯರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಮಂಗಳೂರು ಮಹಾನಗರ ಪಾಲಿಕೆಯ ವಿಜೇತ ಹಾಗೂ ಪರಾಜಿತ ಅಭ್ಯರ್ಥಿಗಳು ಮತ್ತು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಘಟಕಗಳ ಮುಖಂಡರ ಸಭೆ ನಡೆಯಿತು.

# ಮಂಗಳೂರು ಧರ್ಮಕ್ಷೇತ್ರದ ಹಿರಿಯ ಧರ್ಮಗುರು ವಂದನೀಯ ಫಾದರ್ ಜೋನ್ ನೊರೊನ್ಹಾ ನಿಧನ



ಮಂಗಳೂರು ಧರ್ಮಕ್ಷೇತ್ರದ ಹಿರಿಯ ಧರ್ಮಗುರು 82 ವರ್ಷ ಪ್ರಾಯದ ವಂದನೀಯ ಫಾದರ್ ಜೋನ್ ನೊರೊನ್ಹಾ ಅವರು ಅಕ್ಟೋಬರ್ 1ರಂದು ಜೆಪ್ಪುವಿನ ಸ್ಯೆಂಟ್ ಜೂಜೆ ವಾಜ್ ಹೋಮ್ ನಲ್ಲಿ ನಿಧನರಾದರು. 1944ರ ಏಪ್ರಿಲ್ 2ರಂದು ಪಾಂಬೂರಿನಲ್ಲಿ ಮಥಿಯಾಸ್ ಮತ್ತು ಆಂಜೆಲಿನ್ ನೊರೊನ್ಹಾ ದಂಪತಿಯ ಪುತ್ರರಾಗಿ ಜನಿಸಿದ ಅವರು, ಧಾರ್ಮಿಕ ಸೇವೆಯ ಕರೆಗೆ ಓಗೊಟ್ಟು 1969ರ ಡಿಸೆಂಬರ್ 3ರಂದು ಮಂಗಳೂರು ಧರ್ಮಕ್ಷೇತ್ರದ ಧರ್ಮಗುರುಗಳಾಗಿ ದೀಕ್ಷೆ ಪಡೆದಿದ್ದರು.

ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ಧರ್ಮಸೇವೆಯಲ್ಲಿ ಅವರು ಅಗ್ರಾರ್, ಕಿರೆಂ ಮತ್ತು ಮಡಂತ್ಯಾರ್‌ನಲ್ಲಿ ಸಹಾಯಕ ಧರ್ಮಗುರುಗಳಾಗಿ, ಕುಪ್ಪೆಪದವು, ಉಪ್ಪಿನಂಗಡಿ, ಕೊಳಲಗಿರಿ, ರಾಣಿಪುರ ಹಾಗೂ ಕಲ್ಯಾಣಪುರದ ಮೌಂಟ್ ರೋಸರಿ ಸೇರಿದಂತೆ ಹಲವು ಧರ್ಮಕೇಂದ್ರಗಳಲ್ಲಿ ಧರ್ಮಗುರುಗಳಾಗಿ ಸೇವೆ ಸಲ್ಲಿಸಿದರು. 1988–89ರಲ್ಲಿ ರೋಸಾಮಿಸ್ತಿಕಾ ಕಾನ್ವೆಂಟ್‌ನಲ್ಲಿ ಚಾಪ್ಲಿನ್ ಆಗಿಯೂ ಸೇವೆ ಸಲ್ಲಿಸಿದ್ದರು. ದೀರ್ಘಕಾಲದ ಸಕ್ರಿಯ ಧರ್ಮಸೇವೆಯ ಬಳಿಕ 2010ರಲ್ಲಿ ನಿವೃತ್ತರಾದ ಅವರು, ಬಳಿಕ ತಮ್ಮ ಜೀವನದ ಉಳಿದ ಅವಧಿಯನ್ನು ಸ್ಯೆಂಟ್ ಜೂಜೆ ವಾಜ್ ಹೋಮ್ ನಲ್ಲಿ ಕಳೆದರು. ಅವರ ಅಂತ್ಯಕ್ರಿಯೆ ಹಾಗೂ ಅಂತಿಮ ವಿಧಿವಿಧಾನಗಳು ಅಕ್ಟೋಬರ್ 5ರಂದು ಮಂಗಳೂರಿನ ವಾಲೆನ್ಸಿಯಾದ ಸ್ಯೆಂಟ್ ವಿನ್ಸೆಂಟ್ ಫೆರಾರ್ ಚರ್ಚ್‌ನಲ್ಲಿ ನಡೆದವು.

# ಬೆಳ್ತಂಗಡಿಯಲ್ಲಿ ಕ್ರಿಶ್ಚಿಯನ್ ಸಮುದಾಯದ ಸರ್ಕಾರಿ ಸೌಲಭ್ಯಗಳ ಮಾಹಿತಿ ಕಾರ್ಯಾಗಾರ



ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ ಕ್ರಿಶ್ಚಿಯನ್ ಸಮುದಾಯಕ್ಕೆ ಲಭ್ಯವಿರುವ ವಿವಿಧ ಸರ್ಕಾರಿ ಸೌಲಭ್ಯಗಳು ಹಾಗೂ ಯೋಜನೆಗಳ ಕುರಿತು ಮಾಹಿತಿ ನೀಡುವ ಕಾರ್ಯಾಗಾರ ಬೆಳ್ತಂಗಡಿ ಚರ್ಚ್ ಆಡಿಟೋರಿಯಂನಲ್ಲಿ ನಡೆಯಿತು. ಕಥೊಲಿಕ್ ಸಭಾ ಬೆಳ್ತಂಗಡಿ ಘಟಕ ಹಾಗೂ ಬೆಳ್ತಂಗಡಿ ವಲಯ ಪಾಲನಾ ಸಮಿತಿ ಸಹಯೋಗದಲ್ಲಿ ಅಕ್ಟೋಬರ್ 4ರಂದು ಭಾನುವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಸಮುದಾಯದವರಿಗೆ ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಳ್ತಂಗಡಿ ವಲಯದ ಪ್ರಧಾನ ಧರ್ಮಗುರು ಅತೀ ವಂದನೀಯ ಫಾದರ್ ವಾಲ್ಟರ್ ಓಸ್ವಾಲ್ಡ್ ಡಿಮೆಲ್ಲೊ ವಹಿಸಿದ್ದರು. ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಕಾರ್ಯಕ್ರಮ ಉದ್ಘಾಟಿಸಿದರು.

ಉದ್ಘಾಟನಾ ಭಾಷಣದಲ್ಲಿ ಹರೀಶ್ ಪೂಂಜ ಅವರು, ಕ್ರಿಶ್ಚಿಯನ್ ಸಮುದಾಯಕ್ಕೆ ಸರ್ಕಾರದಿಂದ ಲಭ್ಯವಿರುವ ಸೌಲಭ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕರಿಗೆ 'ಬೆಸ್ಟ್ ಅವಾರ್ಡ್–2025' ಹಾಗೂ 'ಉತ್ತಮ ಶಾಸಕ ಪ್ರಶಸ್ತಿ' ಲಭಿಸಿರುವ ಹಿನ್ನೆಲೆಯಲ್ಲಿ ಕಥೊಲಿಕ್ ಕ್ರಿಶ್ಚಿಯನ್ ಸಮುದಾಯದ ಪರವಾಗಿ ಸನ್ಮಾನಿಸಲಾಯಿತು. ಶಾಸಕರ ಸನ್ಮಾನ ಪತ್ರವನ್ನು ಪಾಲನಾ ಸಮಿತಿ ಸದಸ್ಯೆ ಐರಿನ್ ಸಿಕ್ವೇರಾ ವಾಚಿಸಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಜೆರಾಲ್ಡ್ ಡಿಸೋಜ ಅವರು ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದ ಮೂಲಕ ಕ್ರಿಶ್ಚಿಯನ್ ಸಮುದಾಯಕ್ಕೆ ಲಭ್ಯವಿರುವ ವಿವಿಧ ಸರ್ಕಾರಿ ಯೋಜನೆಗಳು ಹಾಗೂ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ವಂದನೀಯ ಫಾದರ್ ವಾಲ್ಟರ್ ಓಸ್ವಾಲ್ಡ್ ಡಿಮೆಲ್ಲೊ ಅವರು ಶಾಸಕರ ಕಾರ್ಯವೈಖರಿಯನ್ನು ಅಭಿನಂದಿಸಿದರು. ಕಥೊಲಿಕ್ ಸಭಾ ಬೆಳ್ತಂಗಡಿ ವಲಯದ ಅಧ್ಯಕ್ಷ ಆಲ್ಬರ್ಟ್ ಸುನಿಲ್ ಮೋನಿಸ್ ಸ್ವಾಗತಿಸಿದರು. ವಲಯ ಕಾರ್ಯದರ್ಶಿ ಆಶಾ ಸಲ್ಡಾನ್ಹಾ ವಂದಿಸಿದರು. ಕಥೊಲಿಕ್ ಸಭಾ ರಾಜಕೀಯ ಸಂಚಾಲಕ ಸ್ಟಾನಿ ಪಿಂಟೊ ಕಾರ್ಯಕ್ರಮ ನಿರೂಪಿಸಿದರು. ವೇದಿಕೆಯಲ್ಲಿ ವಲಯ ಪಾಲನಾ ಸಮಿತಿ ಕಾರ್ಯದರ್ಶಿ ವಾಲ್ಟರ್ ಮೋನಿಸ್ ಹಾಗೂ ಬೆಳ್ತಂಗಡಿ ಘಟಕ ಕಥೊಲಿಕ್ ಸಭಾ ಅಧ್ಯಕ್ಷ ಗಿಲ್ಬರ್ಟ್ ಪಿಂಟೊ ಉಪಸ್ಥಿತರಿದ್ದರು.

# ಬಂಟ್ವಾಳದಲ್ಲಿ ಜಮೀಯ್ಯತುಲ್ ಫಲಾಹ್ ವತಿಯಿಂದ ವಿದ್ಯಾರ್ಥಿ ವೇತನ ವಿತರಣೆ - ಸಾಧಕರಿಗೆ ಸನ್ಮಾನ



ವಿದ್ಯಾರ್ಥಿಗಳು ಕಲಿಕೆಯನ್ನು ಅಪೂರ್ವ ಅವಕಾಶವೆಂದು ಪರಿಗಣಿಸಿ, ಸಭ್ಯ ನಾಗರಿಕ ಬದುಕಿನ ಪಥದಲ್ಲಿ ಗುರಿ ತಪ್ಪದೆ ಮುನ್ನಡೆದರೆ ಯಶಸ್ಸು ಖಚಿತ ಎಂದು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಮಂಗಳೂರು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಬಿ.ಎಂ. ತಾಜುದ್ದೀನ್ ಉಬೈದ್ ಹೇಳಿದರು. ಜಮೀಯ್ಯತುಲ್ ಫಲಾಹ್ ಬಂಟ್ವಾಳ ತಾಲೂಕು ಘಟಕದ ವತಿಯಿಂದ ಬಿ.ಸಿ. ರೋಡ್‌ನ ಲಯನ್ಸ್ ಸೇವಾ ಮಂದಿರದಲ್ಲಿ ನಡೆದ ವಿದ್ಯಾರ್ಥಿ ವೇತನ ವಿತರಣೆ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ಜಮೀಯ್ಯತುಲ್ ಫಲಾಹ್ ದಕ್ಷಿಣ ಕನ್ನಡ–ಉಡುಪಿ ಜಿಲ್ಲಾ ಕೋಶಾಧಿಕಾರಿ ಅಬ್ದುನ್ನಾಸಿರ್ ಕೆ.ಕೆ., ಬಂಟ್ವಾಳ ಘಟಕದ ಆಜೀವ ಸದಸ್ಯರಾದ ಹಾಜಿ ಅಬ್ದುಲ್ ರಝಾಕ್ ಗೋಳ್ತಮಜಲು ಹಾಗೂ ಮೊಹಮ್ಮದ್ ಹನೀಫ್ ಟಿ.ಎಚ್.ಎಂ.ಎ. ಅತಿಥಿಗಳಾಗಿ ಭಾಗವಹಿಸಿದ್ದರು. ತಾಲೂಕು ಘಟಕದ ಅಧ್ಯಕ್ಷ ಬಿ.ಎಂ. ಅಬ್ಬಾಸ್ ಅಲಿ ಅಧ್ಯಕ್ಷತೆ ವಹಿಸಿದ್ದರು.

ಸಾಧಕರಿಗೆ ಗೌರವ: ರಾಜ್ಯ ಪ್ರಶಸ್ತಿ ಪುರಸ್ಕೃತ ಉಪನ್ಯಾಸಕ ಹಾಗೂ ಉಪ್ಪಿನಂಗಡಿ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಇಬ್ರಾಹಿಂ ಎಂ. ಮತ್ತು ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ, ಮೊಡಂಕಾಪು ಕಾರ್ಮೆಲ್ ಪ್ರೌಢಶಾಲೆಯ ಸಹ ಶಿಕ್ಷಕ ರೋಶನ್ ಅಲೆಕ್ಸಾಂಡರ್ ಪಿಂಟೋ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ತಾಲೂಕಿನ ಆಯ್ದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಮೀಯ್ಯತುಲ್ ಫಲಾಹ್ ಬಂಟ್ವಾಳ ಘಟಕದ ಆಜೀವ ಸದಸ್ಯರಾದ ಹಾಜಿ ಬಿ.ಎ. ಮಹಮ್ಮದ್ ಬಂಟ್ವಾಳ, ಪಿ. ಮಹಮ್ಮದ್ ಪಾಣೆಮಂಗಳೂರು, ಎಸ್. ಮಹಮ್ಮದ್ ನಾರಂಕೋಡಿ, ವಿ.ಎಚ್. ಅಶ್ರಫ್ ವಿಟ್ಲ, ಅಹ್ಮದ್ ಮುಸ್ತಫಾ ಗೋಳ್ತಮಜಲು, ಶಾಕಿರ್ ಅಳಕೆಮಜಲು, ಇಸುಬು ಹಾಜಿ ಕಡಂಬು, ಬಶೀರ್ ವಗ್ಗ, ಇಬ್ರಾಹಿಂ ಮೊಯ್ದಿನ್ ನಂದಾವರ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕೋಶಾಧಿಕಾರಿ ಲತೀಫ್ ನೇರಳಕಟ್ಟೆ ವಿದ್ಯಾರ್ಥಿ ವೇತನ ಫಲಾನುಭವಿಗಳ ಪಟ್ಟಿಯನ್ನು ವಾಚಿಸಿದರು. ಕೆ.ಎಸ್. ಮುಹಮ್ಮದ್ ಕಡೇಶ್ವಾಲ್ಯ ಕಿರಾಅತ್ ಪಠಿಸಿದರು. ಬಿ.ಎಂ. ತುಂಬೆ ಪ್ರಸ್ತಾವನೆಗೈದರು. ಕಾರ್ಯದರ್ಶಿ ಅಬ್ದುಲ್ ಹಕೀಂ ಕಲಾಯಿ ಸ್ವಾಗತಿಸಿದರು. ಉಪಾಧ್ಯಕ್ಷ ಶೇಖ್ ರಹ್ಮತುಲ್ಲಾ ವಂದಿಸಿದರು. ಉಪನ್ಯಾಸಕ ಅಬ್ದುಲ್ ರಝಾಕ್ ಅನಂತಾಡಿ ಕಾರ್ಯಕ್ರಮ ನಿರೂಪಿಸಿದರು.

# ದಯಾ ವಿಶೇಷ ಮಕ್ಕಳ ಶಾಲೆಗೆ ಕಥೋಲಿಕ್ ಸಭಾ ಬೆಳ್ತಂಗಡಿ ವಲಯದಿಂದ '2.30 ಲಕ್ಷ ನೆರವು' - ಕೃತಜ್ಞತೆ ಸಲ್ಲಿಸಿದ ಫಾದರ್ ವಾಲ್ಟರ್ ಡಿಮೆಲ್ಲೊ



ಕಥೊಲಿಕ್ ಸಭಾ ಮಂಗ್ಳುರ್ ಪ್ರದೇಶ್ (ರಿ.) ಬೆಳ್ತಂಗಡಿ ವಲಯ ಇದರ ಆಧ್ಯಾತ್ಮಿಕ ನಿರ್ದೇಶಕರು, ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ಬೆಳ್ತಂಗಡಿಯ ದಯಾ ವಿಶೇಷ ಮಕ್ಕಳ ಶಾಲೆಗೆ ಭೇಟಿ ನೀಡಿ, ವಿಶೇಷ ಮಕ್ಕಳೊಂದಿಗೆ ಸಮಯ ಕಳೆದರು. ಕಥೊಲಿಕ್ ಸಭಾ ಬೆಳ್ತಂಗಡಿ ವಲಯದ ವಿವಿಧ ಘಟಕಗಳಿಂದ ಸಂಗ್ರಹಿಸಲಾದ ಆಹಾರ ಸಾಮಗ್ರಿಗಳು ಹಾಗೂ 2,30,700 ಆರ್ಥಿಕ ನೆರವನ್ನು ದಯಾ ಸಂಸ್ಥೆಗೆ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅತೀ ವಂದನೀಯ ಫಾದರ್ ವಾಲ್ಟರ್ ಓಸ್ವಾಲ್ಡ್ ಡಿಮೆಲ್ಲೊ, ದಯಾ ವಿಶೇಷ ಮಕ್ಕಳ ಮೇಲಿನ ಪ್ರೀತಿ ಹಾಗೂ ಕಾಳಜಿಯಿಂದ ಕಥೊಲಿಕ್ ಸಭಾ ಸದಸ್ಯರು ನೀಡಿದ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು. ಸಹಕಾರ ನೀಡಿದ ಎಲ್ಲರಿಗೂ ದೇವರು ಉತ್ತಮ ಆರೋಗ್ಯ, ಸಂತೋಷ ಹಾಗೂ ಸಮೃದ್ಧಿಯನ್ನು ಕರುಣಿಸಲಿ ಎಂದು ಹಾರೈಸಿದರು.

ವಲಯದ ಅಧ್ಯಕ್ಷ ಆಲ್ಬರ್ಟ್ ಸುನೀಲ್ ಮೋನಿಸ್ ಅವರು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರನ್ನು ಸ್ವಾಗತಿಸಿದರು. ಹೆಚ್ಚಿನ ಆರ್ಥಿಕ ನೆರವು ನೀಡಿದ ಗಾರ್ಡಾಡಿ ಚರ್ಚ್‌ನ ಸದಸ್ಯರಿಗೆ ವಿಶೇಷ ಧನ್ಯವಾದ ಸಲ್ಲಿಸಲಾಯಿತು. ಗಾರ್ಡಾಡಿ ಚರ್ಚ್ ಪಾಲನಾ ಸಮಿತಿಯ ಉಪಾಧ್ಯಕ್ಷ ಸ್ಟೀವನ್ ಮೋನಿಸ್ ಅವರಿಗೆ ಕೃತಜ್ಞತೆ ವ್ಯಕ್ತಪಡಿಸಲಾಯಿತು.

ಬೆಳ್ತಂಗಡಿ ವಲಯದ ವಿವಿಧ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಗಾರ್ಡಾಡಿ ಮತ್ತು ನಾಳ ಚರ್ಚ್‌ಗಳ ಧರ್ಮಗುರುಗಳು ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ಸಲ್ಲಿಸಲಾಯಿತು.

ವಲಯದ ಕಾರ್ಯದರ್ಶಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.

# ದಸರಾ ಪ್ರವಾಸಕ್ಕೆ KSRTC ವಿಶೇಷ ಪ್ಯಾಕೇಜ್- 5 ಧಾರ್ಮಿಕ ಪ್ರವಾಸ ಮಾರ್ಗಗಳಿಗೆ ಅವಕಾಶ

**6 ರಿಂದ 12 ವರ್ಷದ ಮಕ್ಕಳಿಗೆ ವಿಶೇಷ ದರ - ಊಟದ ವ್ಯವಸ್ಥೆಯೂ ಲಭ್ಯ**

ದಸರಾ ಹಬ್ಬದ ಪ್ರಯುಕ್ತ ಮಂಗಳೂರು KSRTC ವಿಭಾಗವು ಸಾರ್ವಜನಿಕರ ಅನುಕೂಲಕ್ಕಾಗಿ ಮಂಗಳೂರು ಹಾಗೂ ಸುತ್ತಮುತ್ತಲಿನ ಪ್ರಮುಖ ಧಾರ್ಮಿಕ ಕ್ಷೇತ್ರಗಳು ಮತ್ತು ಪ್ರವಾಸಿ ತಾಣಗಳಿಗೆ ಐದು ವಿಶೇಷ ಪ್ಯಾಕೇಜ್ ಪ್ರವಾಸಗಳನ್ನು ಆಯೋಜಿಸಿದೆ. ಅಕ್ಟೋಬರ್ 11ರಿಂದ 20ರ ತನಕ ಈ ವಿಶೇಷ ಪ್ರವಾಸಗಳು ಕಾರ್ಯಾಚರಿಸಲಿದ್ದು, ಕುಟುಂಬ ಸಮೇತರಾಗಿ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಲು ಅನುಕೂಲವಾಗುವಂತೆ ಪ್ಯಾಕೇಜ್‌ಗಳನ್ನು ರೂಪಿಸಲಾಗಿದೆ.

ಈ ವಿಶೇಷ ಪ್ರವಾಸಗಳಲ್ಲಿ ವಯಸ್ಕರು ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ ಪ್ರತ್ಯೇಕ ಪ್ರಯಾಣ ದರ ನಿಗದಿಪಡಿಸಲಾಗಿದೆ. ಕೆಲವು ಪ್ಯಾಕೇಜ್‌ಗಳಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

**ಮಂಗಳೂರು ದಸರಾ ನವದುರ್ಗಾ ದರ್ಶನ:** ಬೆಳಗ್ಗೆ 8ಕ್ಕೆ ಮಂಗಳೂರು ಬಸ್ ನಿಲ್ದಾಣದಿಂದ ಹೊರಡುವ ಬಸ್ ಮರೋಳಿ ಸೂರ್ಯನಾರಾಯಣ ದೇವಸ್ಥಾನ, ಬೋಳಾರ ಶ್ರೀ ಮಾರಿಯಮ್ಮ ದೇವಸ್ಥಾನ, ಶ್ರೀ ಮಂಗಳಾದೇವಿ ದೇವಸ್ಥಾನ, ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಕೊಡ್ಯಾಡ್ಕ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಬಪ್ಪನಾಡು, ಸಸಿಹಿತ್ಲು, ಚಿತ್ರಾಪುರ, ಉರ್ವ ಮಾರಿಯಮ್ಮ ದೇವಸ್ಥಾನ ಹಾಗೂ ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನಗಳಿಗೆ ಭೇಟಿ ನೀಡಲಿದೆ. ರಾತ್ರಿ 8.30ಕ್ಕೆ ಮಂಗಳೂರು ತಲುಪಲಿದೆ. ವಯಸ್ಕರಿಗೆ 500 ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ 400. ಮಧ್ಯಾಹ್ನದ ಊಟದ ವ್ಯವಸ್ಥೆ ಇದೆ.

**ಮಂಗಳೂರು-ತಲಕಾವೇರಿ-ಭಾಗಮಂಡಲ:** ಬೆಳಗ್ಗೆ 7ಕ್ಕೆ ಹೊರಡುವ ಬಸ್ ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನ, ತಲಕಾವೇರಿ ದೇವಸ್ಥಾನ, ಶ್ರೀ ಭಗಂಡೇಶ್ವರ ಸ್ವಾಮಿ ದೇವಸ್ಥಾನ, ತ್ರಿವೇಣಿ ಸಂಗಮ, ಅಬ್ಬಿಫಾಲ್ಸ್ ಹಾಗೂ ರಾಜಾಸೀಟ್‌ಗೆ ಭೇಟಿ ನೀಡಲಿದೆ. ರಾತ್ರಿ 9.30ಕ್ಕೆ ಮಂಗಳೂರು ತಲುಪಲಿದೆ. ವಯಸ್ಕರಿಗೆ 600 ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ 500.

**ಮಂಗಳೂರು-ಕೊಲ್ಲೂರು:** ಬೆಳಗ್ಗೆ 8ಕ್ಕೆ ಹೊರಡುವ ಬಸ್ ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನ, ಕಾಪು ಮಾರಿಯಮ್ಮ ದೇವಸ್ಥಾನ, ಮಂದಾರ್ತಿ ದುರ್ಗಾಪರಮೇಶ್ವರಿ ದೇವಸ್ಥಾನ, ಕಮಲಶಿಲೆ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನ ಹಾಗೂ ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನಗಳಿಗೆ ಭೇಟಿ ನೀಡಲಿದೆ. ರಾತ್ರಿ 8ಕ್ಕೆ ಮಂಗಳೂರು ತಲುಪಲಿದೆ. ವಯಸ್ಕರಿಗೆ 600 ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ 500. ಮಧ್ಯಾಹ್ನದ ಊಟದ ವ್ಯವಸ್ಥೆ ಇದೆ.

**ಮಂಗಳೂರು-ಸಿಗಂದೂರು:** ಬೆಳಗ್ಗೆ 7ಕ್ಕೆ ಮಂಗಳೂರಿನಿಂದ ಹೊರಡುವ ಬಸ್ ಕುಂದಾಪುರ ಮಾರ್ಗವಾಗಿ ಸಿಗಂದೂರು ಶ್ರೀ ಚೌಡೇಶ್ವರಿ ದೇವಸ್ಥಾನ ಹಾಗೂ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ರಾತ್ರಿ 7.30ಕ್ಕೆ ಮಂಗಳೂರು ತಲುಪಲಿದೆ. ವಯಸ್ಕರಿಗೆ 700 ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ 600.

**ಮಂಗಳೂರು-ಶೃಂಗೇರಿ:** ಬೆಳಗ್ಗೆ 8ಕ್ಕೆ ಹೊರಡುವ ಬಸ್ ಕೊಡ್ಯಾಡ್ಕ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ, ಶ್ರೀ ಶಾರದಾಂಬ ದೇವಸ್ಥಾನ, ಹರಿಹರಪುರ ಮಠ, ಶ್ರೀ ಋಷ್ಯಶೃಂಗೇಶ್ವರ ದೇವಸ್ಥಾನ ಹಾಗೂ ಕಿಗ್ಗ ಕ್ಷೇತ್ರಗಳಿಗೆ ಭೇಟಿ ನೀಡಿ ರಾತ್ರಿ 7.30ಕ್ಕೆ ಮಂಗಳೂರು ತಲುಪಲಿದೆ. ವಯಸ್ಕರಿಗೆ 600 ಹಾಗೂ 6ರಿಂದ 12 ವರ್ಷದ ಮಕ್ಕಳಿಗೆ 500. ಮಧ್ಯಾಹ್ನದ ಊಟದ ವ್ಯವಸ್ಥೆ ಇದೆ.

**ಮುಂಗಡ ಬುಕ್ಕಿಂಗ್ ಲಭ್ಯ:** ಪ್ರಯಾಣಿಕರ ಅನುಕೂಲಕ್ಕಾಗಿ ವಿಶೇಷ ಪ್ಯಾಕೇಜ್ ಬಸ್‌ಗಳಿಗೆ ಮೂಲಕ ಮುಂಗಡ ಸೀಟ್ ಕಾಯ್ದಿರಿಸುವ ವ್ಯವಸ್ಥೆ ಮಾಡಲಾಗಿದೆ. ದಸರಾ ರಜೆಯಲ್ಲಿ ಕುಟುಂಬ ಸಮೇತರಾಗಿ ಪ್ರವಾಸ ಕೈಗೊಳ್ಳಲು ಬಯಸುವವರು ಈ ವಿಶೇಷ ಪ್ಯಾಕೇಜ್‌ಗಳ ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮಂಗಳೂರು 1ನೇ ಘಟಕ ವ್ಯವಸ್ಥಾಪಕರು 7760990713, 3ನೇ ಘಟಕ ವ್ಯವಸ್ಥಾಪಕರು 7760990723, ಮುಂಗಡ ಬುಕ್ಕಿಂಗ್ ಕೌಂಟರ್ 9663211553, ಮಂಗಳೂರು ಬಸ್ ನಿಲ್ದಾಣ 7760990720, ವಿಭಾಗೀಯ ಕಚೇರಿ 7760990711/9663266221 ಸಂಪರ್ಕಿಸಬಹುದು ಎಂದು ಮಂಗಳೂರು KSRTC ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಾ ಪ್ರತಿಭೆಗಳಿಗೆ ಸುವರ್ಣಾವಕಾಶ - 'ಕಲಾ ಪ್ರತಿಭೋತ್ಸವ'ಕ್ಕೆ ಅರ್ಜಿ ಆಹ್ವಾನ

ಮಕ್ಕಳು ಹಾಗೂ ಯುವಜನರಲ್ಲಿ ಅಡಗಿರುವ ಕಲಾ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ವೇದಿಕೆ ಒದಗಿಸುವ ಮೂಲಕ ಕಲಾ ನೈಪುಣ್ಯವನ್ನು ಮತ್ತಷ್ಟು ಬೆಳೆಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ 'ಕಲಾ ಪ್ರತಿಭೋತ್ಸವ' ಆಯೋಜಿಸಿದ್ದು, ಅರ್ಜಿ ಆಹ್ವಾನಿಸಿದೆ. ಬಾಲ ಪ್ರತಿಭೆ, ಕಿಶೋರ ಪ್ರತಿಭೆ ಹಾಗೂ ಯುವ ಪ್ರತಿಭೆ ಎಂಬ ಮೂರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಬಾಲ ಪ್ರತಿಭೆ ವಿಭಾಗದಲ್ಲಿ 8 ವರ್ಷ ತುಂಬಿದ್ದು 14 ವರ್ಷಕ್ಕಿಂತ ಕಡಿಮೆ ವಯಸ್ಸಿನವರು, ಕಿಶೋರ ಪ್ರತಿಭೆ ವಿಭಾಗದಲ್ಲಿ 14 ವರ್ಷ ತುಂಬಿದ್ದು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಹಾಗೂ ಯುವ ಪ್ರತಿಭೆ ವಿಭಾಗದಲ್ಲಿ 18 ವರ್ಷ ತುಂಬಿದ್ದು 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಭಾಗವಹಿಸಬಹುದು.

ವಿವಿಧ ಕಲಾ ಪ್ರಕಾರಗಳಲ್ಲಿ ಸ್ಪರ್ಧೆ: ಬಾಲ ಹಾಗೂ ಕಿಶೋರ ಪ್ರತಿಭೆಗಳ ವೈಯಕ್ತಿಕ ವಿಭಾಗದಲ್ಲಿ ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಚಿತ್ರಕಲೆ, ಜನಪದ ಗೀತೆ, ಹಿಂದೂಸ್ತಾನಿ ವಾದ್ಯ ಸಂಗೀತ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆಗಳು ನಡೆಯಲಿವೆ. ಯುವ ಪ್ರತಿಭೆ ವಿಭಾಗದಲ್ಲಿ ಆಶುಭಾಷಣ, ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಕರ್ನಾಟಕ ಶಾಸ್ತ್ರೀಯ ಸಂಗೀತ, ಚಿತ್ರಕಲೆ, ಹಿಂದೂಸ್ತಾನಿ ವಾದ್ಯ ಸಂಗೀತ ಹಾಗೂ ಜನಪದ ಗೀತೆ ಸ್ಪರ್ಧೆಗಳಿವೆ. ಯುವ ಪ್ರತಿಭೆ ವಿಭಾಗದ ಸಮೂಹ ಸ್ಪರ್ಧೆಯಲ್ಲಿ ನಾಟಕ ಹಾಗೂ ಜನಪದ ನೃತ್ಯಕ್ಕೆ ಅವಕಾಶವಿದೆ. ನಾಟಕಕ್ಕೆ 45 ನಿಮಿಷ ಹಾಗೂ ಜನಪದ ನೃತ್ಯಕ್ಕೆ 10 ನಿಮಿಷ ಸಮಯ ನಿಗದಿಪಡಿಸಲಾಗಿದೆ. ಸಮೂಹ ಸ್ಪರ್ಧೆಯಲ್ಲಿ ತಂಡದಲ್ಲಿ ಕನಿಷ್ಠ 10 ಹಾಗೂ ಗರಿಷ್ಠ 15 ಮಂದಿ ಇರಬೇಕು. ಜನಪದ ನೃತ್ಯ ವಿಭಾಗದಲ್ಲಿ ಸಿದ್ದಿ ಡಮಾಮಿ, ಡೊಳ್ಳು, ಗೊರವರ, ಗೊರುಕಾನ, ಜಗ್ಗಲಿಗೆ, ಕಂಗೀಲು, ಸೋಮನ ಕುಣಿತ, ಪಟಾ ಕುಣಿತ, ಕಂಸಾಳೆ, ಪೂಜಾ ಕುಣಿತ, ಜಡೆ ಕೋಲಾಟ, ಲಂಬಾಣಿ, ಕರಡಿ ಮಜಲು, ಕೊಡವ ನೃತ್ಯಗಳು ಸೇರಿದಂತೆ ನಿರ್ದಿಷ್ಟ ಜನಪದ ನೃತ್ಯಗಳಿಗೆ ಮಾತ್ರ ಅವಕಾಶವಿದೆ. ಮುದ್ರಿತ ಜನಪದ ಗೀತೆಗಳ ಆಧಾರಿತ ನೃತ್ಯಗಳನ್ನು ಪರಿಗಣಿಸಲಾಗುವುದಿಲ್ಲ.

ರಾಜ್ಯಮಟ್ಟದಲ್ಲಿ ಆಕರ್ಷಕ ನಗದು ಬಹುಮಾನ: ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರನ್ನು ವಲಯಮಟ್ಟಕ್ಕೆ ಕಳುಹಿಸಲಾಗುತ್ತದೆ. ವಲಯಮಟ್ಟದಿಂದ ರಾಜ್ಯಮಟ್ಟಕ್ಕೆ ಸ್ಪರ್ಧಿಗಳನ್ನು ಆಯ್ಕೆ ಮಾಡಲಾಗುತ್ತದೆ. ಜಿಲ್ಲಾ ಮತ್ತು ವಲಯ ಮಟ್ಟದಲ್ಲಿ ನಗದು ಬಹುಮಾನ ಇರುವುದಿಲ್ಲ. ವಲಯ ಹಾಗೂ ರಾಜ್ಯಮಟ್ಟದಲ್ಲಿ ಭಾಗವಹಿಸುವವರಿಗೆ ಪ್ರಯಾಣ ವೆಚ್ಚ ನೀಡಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಭಾಗವಹಿಸುವ ಎಲ್ಲ ಸ್ಪರ್ಧಿಗಳಿಗೂ ಪ್ರಮಾಣಪತ್ರ ನೀಡಲಾಗುತ್ತದೆ. ರಾಜ್ಯಮಟ್ಟದ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರಿಗೆ ಕ್ರಮವಾಗಿ 15,000, 10,000 ಹಾಗೂ 7,500 ನಗದು ಬಹುಮಾನ ಮತ್ತು ಪ್ರಮಾಣಪತ್ರ ನೀಡಲಾಗುತ್ತದೆ. ಯುವ ಪ್ರತಿಭೆ ವಿಭಾಗದ ರಾಜ್ಯಮಟ್ಟದ ಸಮೂಹ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆಯುವ ತಂಡಗಳಿಗೆ ಕ್ರಮವಾಗಿ 50,000, 40,000 ಹಾಗೂ 30,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಲಾಗುತ್ತದೆ.

ಅರ್ಜಿಗೆ ಅಕ್ಟೋಬರ್ 19 ಕೊನೆಯ ದಿನ: ಸ್ಪರ್ಧೆಯಲ್ಲಿ ಭಾಗವಹಿಸುವವರು ವಯಸ್ಸಿನ ದೃಢೀಕರಣಕ್ಕಾಗಿ ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಯಿಂದ ಪಡೆದ ದಾಖಲೆಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಅರ್ಜಿಗೆ ನಿಗದಿತ ನಮೂನೆ ಇಲ್ಲವಾಗಿದ್ದು, ಬಿಳಿ ಹಾಳೆಯಲ್ಲಿ ಸ್ವವಿವರಗಳನ್ನು ನಮೂದಿಸಿ ಸಲ್ಲಿಸಬಹುದು. ಖಾಸಗಿ ಅಭ್ಯರ್ಥಿಗಳು ಶಾಲೆ/ಕಾಲೇಜಿನ ಜನ್ಮ ದಿನಾಂಕ ದೃಢೀಕರಣ ಪತ್ರ ಅಥವಾ ಪಂಚಾಯಿತಿ, ಪುರಸಭೆ, ನಗರಸಭೆ ನೀಡುವ ಜನನ ಪ್ರಮಾಣ ಪತ್ರ ಸಲ್ಲಿಸಬೇಕು.

ಚಿತ್ರಕಲಾ ಸ್ಪರ್ಧಿಗಳು ಅಗತ್ಯವಿರುವ ಬಣ್ಣ ಮತ್ತಿತರ ಸಾಮಗ್ರಿಗಳನ್ನು ತಾವೇ ತರಬೇಕು. ನೃತ್ಯ ಪ್ರದರ್ಶನವನ್ನು ನೇರವಾಗಿ ಅಥವಾ ಧ್ವನಿಮುದ್ರಿತ ಮಾಧ್ಯಮದ ಮೂಲಕ ನೀಡಬಹುದು. ಇದಕ್ಕಾಗಿ ಪೆನ್‌ಡ್ರೈವ್ ಅಥವಾ ಸಿಡಿಯನ್ನು ಸ್ಪರ್ಧಿಗಳು ತರಬೇಕು. ಮೊಬೈಲ್ ಜಾಕ್ ಸೌಲಭ್ಯ ಒದಗಿಸಲಾಗುತ್ತದೆ. ತೀರ್ಪುಗಾರರ ನಿರ್ಣಯವೇ ಅಂತಿಮವಾಗಿರುತ್ತದೆ. ಒಬ್ಬ ಸ್ಪರ್ಧಿಗೆ ಒಂದು ಕಲಾ ಪ್ರಕಾರದಲ್ಲಿ ಮಾತ್ರ ಭಾಗವಹಿಸಲು ಅವಕಾಶವಿದೆ. ಶಾಲಾ ಮುಖ್ಯಸ್ಥರು ತಮ್ಮ ಶಾಲೆಯ ಮೂಲಕ ಅರ್ಜಿ ಸಲ್ಲಿಸುವ ಸ್ಪರ್ಧಿಗಳ ಕಲಾ ಪ್ರಕಾರ ಹಾಗೂ ವಿಭಾಗವಾರು ಜನ್ಮ ದಿನಾಂಕವನ್ನು ದೃಢೀಕರಿಸಿ ಪ್ರತ್ಯೇಕ ಪಟ್ಟಿಯೊಂದಿಗೆ ಕಳುಹಿಸಬೇಕು. ಅರ್ಜಿಗಳನ್ನು ಅಕ್ಟೋಬರ್ 19ರೊಳಗೆ ನಗರದ ಉರ್ವಸ್ಟೋರ್‌ನಲ್ಲಿರುವ ತುಳು ಭವನದಲ್ಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯ 0824–2951327 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## Father Muller Medical College Secures `2nd Rank in India for ADR Monitoring'

Adverse Drug Reaction (AMC) Monitoring Centre, Department of Pharmacology, Father Muller Medical College, Mangaluru; Under Indian Pharmacopoeia Commission, National Co-ordination Centre - Pharmacovigilance Program of India, Ministry of Health and Family Welfare, Government of India, secured the 2nd best-performing ADR monitoring centre in India among 1000-plus centres under AMC with the Pharmacovigilance associate category for the year 2025-2026. This achievement was based on the number of adverse drug reactions reported and community sensitization on adverse drug reaction reporting done during the 6th NATIONAL PHARMACOVIGILANCE WEEK 17th - 23rd September 2026. Awareness and sensitization of adverse drug reactions and their reporting was done to the patients and to the community at Primary Health Centres and community health centres at Namma Clinic, Malavoor; Urban Primary Health Centres, Jeppu; Father Muller Urban Health Training Centre, Jyothinagar; Father Muller Salvadore Monteiro Rural Health Training Centre (RHTC) in Bajpe and Health subcentres at Ammunje and Ammemar, Thumbay; Karambar school, Malavoor. This sensitization was done with the help of pamphlets and banners by Dr Chandralekha N., Prof & Head, AMC Coordinator, Dept of Pharmacology, Dr Keerthana Melanta, Jr Pharmacovigilance Associate, Post graduates- Dr Sharmi, Dr Amith, Dr Laalithya, Dr Sidharth, Dr Ashok, Dr Annie, Dr Shreya of Pharmacology, doctors, interns posted at these centres from 17th to 23rd September 2026The Drug Allergy Card was released by Rev. Fr Faustine Lucas Lobo, Director of Father Muller Charitable Institutions, on 30th September 2026. This initiative of the Adverse Drug Reaction (ADR) Monitoring Centre, Department of Pharmacology, was introduced to mark the 6th National Pharmacovigilance Week, observed from



17th to 23rd September 2026. This drug allergy card will help in preventing inadvertent re-exposure to the offending or related drugs and prevent adverse drug reactions and will promote both medication and patient safety. The drug allergy card release ceremony and prize distribution were graced by Rev. Fr Faustine Lucas Lobo, Director, Father Muller Charitable Institutions; Chief guest- Dr Rajendra Holla, Professor, Department of Pharmacology, K.S. Hegde Medical Academy, Mangalore; Dr Padmaja Udaykumar, Professor and Medication Safety Officer, Department of Pharmacology; Dr Chandralekha N., Professor and Head and ADR Monitoring Centre Coordinator, Department of Pharmacology and Dr Scandashree S., Associate Professor, Department of Pharmacology, Dr Keerthana Melanta, Junior Pharmacovigilance Associate.Dr Padmaja Udaykumar, Professor & Medication Safety Officer, Dept of Pharmacology was the Organising Chairperson, Dr Chandralekha N., Professor and Head, AMC Co-ordinator, Dept of Pharmacology was the Organising secretary, Dr Keerthana Melanta is the Junior Pharmacovigilance Associate was the joint organising secretary for the activities of the 6th NATIONAL PHARMACOVIGILANCE WEEK 17th -23rd September 2026. Dr Akshatha Rao Aroor, Professor, Dept of Medicine is the Deputy Coordinator of the AMC.Other activities conducted as a part of National Pharmacovigilance Week 2026

**1. Digital Poser Competition- under 2 categories were conducteda) a) Topic:** Pharmacovigilance of Drugs Affecting the Liver and Kidney: What, How and Where to Report **English posters: Winner**-Yashitha M.P.-Pharm D intern, Karavali College of Pharmacy, Managlore **Kannada Posters: Winner**-Ms Lona Rheshal Gama-Pharm D intern, Karavali College of Pharmacy, Managlore **b)** Open Category for faculty and students of Medical, allied, physiotherapy, nursing, pharmacy, teaching and non-teaching staff of the hospital **1st prize-**Dr Jenita Veigas (Physician assistant, Dept of General medicine, FMHT) **2nd prize**-Dr Shiji P.J. (Professor, Dept of Community nursing, FMCON) **2. Proactive Pharmacovigilance award for reporting highest number of Adverse Drug Reactions Winner**-Sana Roshan, Pharm D intern, Karavali College of Pharmacy, Managlore **Runner -** Vailentina P. Gonsalves, Pharm D intern

The release of drug allergy card and prize distribution for all the winners were done on 30th Sep, 2026 at the Inaugural of the CME-Beyond scales and sugars: Advances in Metabolic Pharmacotherapy. The AMC coordinator thanked Pharm D interns, doctors and nurses of the hospital, Pharmacovigilance committee members for their support in reporting adverse drug reactions and also thanked Dr Padmaja Udaykumar, Professor, Medication Safety Officer, for being the driving force behind this achievement. The event was attended by members of the faculty, postgraduates of dept of Pharmacology, Pharmacovigilance Committee, Heads of Departments, faculty members, postgraduate students and delegates from the institution and neighbouring medical colleges.

## Ryshivana Hosts Week-Long Symposium on Administration and Leadership

Ryshivana hosted a week-long Symposium on Administration aimed at equipping religious and institutional leaders with practical insights into responsible administration, leadership, financial accountability and conflict management. The inaugural function was held on October 5. Welcoming the gathering, Rev. Fr Dominic Vas, OCD, Director, Ryshivana, explained the significance of the institution's name. The acronym RYSHI represents Religion, Spirituality, Health and Integration, reflecting the four dimensions that are harmoniously blended at Ryshivana.Speaking about the purpose of the symposium, Fr Dominic said the programme would focus on managing resources responsibly, balancing accountability with compassion, remaining spiritually grounded while shouldering administrative responsibilities, and handling conflicts and decision-making effectively.The chief guest, Dr Laveena Noronha, Founder of Ave Maria Palliative Care Centre, Vamanjoor, shared her long association with Ryshivana and the Carmelite Fathers. Recalling her years of teaching at spirituality centres of the Karnataka-Goa Province, particularly at Ryshivana, she described the place as one of scenic beauty that facilitates inner silence and spiritual reflection. She also recalled her association with the Carmelite Fathers in providing spiritual support to palliative care patients, particularly during the final stages of their lives.Yogacharya V.L. Rego, Founder and President of Integral Yoga Satsanga, Mangaluru, was the guest of honour. Introducing him, Fr Dominic Vas highlighted his pioneering contribution to promoting yoga in coastal Karnataka.Yogacharya



Rego has conducted more than 500 yoga camps in India and abroad and is associated with the publication To Christ Through Yoga – Integral Yoga. He played a foundational role in the establishment of Ryshivana, having purchased the property and subsequently handed it over to the Carmelites, who have continued its mission of holistic formation through yoga, retreats, symposiums and seminars.In recognition of his contribution, Yogacharya Rego was honoured with a shawl, memento and sapling.The inaugural function was presided over by Allen C.A. Pereira, former Chairman and Managing Director of Bank of Maharashtra and Chairman of InSolutaire Global Limited, Mumbai.In his presidential address, Pereira quoted English poet John Donne, saying, "No man is an island," and emphasised that human beings are social by nature, making effective leadership and administration essential for the healthy functioning of any organisation.He highlighted four key pillars of non-profit organisations — efficiency, collaboration, transparency and sensitivity. He stressed that organisations should strive for efficiency without unhealthy competition, promote collaboration, maintain transparency to build trust, and ensure that administration remains sensitive, graceful and affordable rather than simply free.Drawing an analogy, he said that when the overhead tank has clean water, all the ground-level tanks will also receive clean water. Similarly, when leaders are efficient, trustworthy, sensitive and compassionate, these qualities will naturally influence the entire organisation. Rev. Fr Archiebald Gonsalves, OCD, Programme Coordinator, compered the inaugural programme and presented an overview of the week-long symposium, which will examine administration from both canonical and legal perspectives. The symposium will cover a wide range of topics, including financial administration, accountability, FCRA regulations, properties and assets, societies and trusts, new labour laws, the role of a Public Relations Officer, construction works and social apostolate in religious institutions, the use of Artificial Intelligence in administration, and empowering religious men and women in administrative responsibilities. These sessions will be conducted by eminent professionals and experts, including Chartered Accountant Mr. Sunil Gonsalves of Mangaluru. On the concluding day, former MLA J.R. Lobo will address the participants on "Administrative Challenges Faced by Christian Leadership" and distribute certificates to the participants. The inaugural programme concluded with a hymn at around 10.45 a.m., marking the beginning of a week of reflection, learning and practical training in administration and leadership.

## Mangaluru's Sana Kayyar Shines for Uganda at `Chess Olympiad with 7.5/11'

Mangaluru-origin Woman International Master (WIM) Sana Om Prakash Kayyar has brought pride to the city and Derik's Chess School (DCS) by representing Uganda at the 46th Chess Olympiad in Uzbekistan, where she delivered an impressive performance on the international stage. Playing on Board 1 for Uganda in all 11 rounds, Sana scored 7.5 points out of 11, recording five wins, five draws and just one loss. According to official Chess-Results records, she achieved a 2084 performance rating and gained 66.4 Elo rating points from her Olympiad performance. Sana registered victories against opponents representing DR Congo, Fiji, Cape Verde, Pakistan and Palestine, while also holding several strong international players to draws. Her latest Olympiad performance adds another significant milestone to an already impressive international chess career. Sana's Major Achievements : 2022: African Youth U-14 Girls – Silver Medal; awarded WCM title, 2024: Chess Olympiad – 6.5/9; awarded WFM title, 2025: African Youth U-18 Girls Champion; awarded WIM title, 2026: Uganda Women's Champion; Chess Olympiad – 7.5/11Sana has been associated with Derik's Chess



School, Mangaluru, since her early competitive years. The chess academy has played an important role in nurturing her talent and takes pride in having been part of her journey from a promising young player to a Woman International Master and Olympiad Board 1 player. Congratulating Sana on her achievement, Derik's Chess School said it was a proud moment for Mangaluru and the academy to see a Mangalore-origin player represent Uganda on one of the world's biggest team chess platforms and score an impressive 7.5/11. The school also congratulated Sana and her parents for the remarkable achievement and wished her continued success in her international chess career. Sana's performance at the Olympiad has once again highlighted the growing international presence of chess talent nurtured in Mangaluru.

## DK Congress President Padmaraj Poojary Meets Mangaluru Bishop, Seeks Blessings

Newly appointed Dakshina Kannada District Congress President Padmaraj Poojary paid a courtesy visit to the Bishop's House in Mangaluru and met Most Rev. Dr Peter Paul Saldanha, Bishop of the Diocese of Mangalore, seeking his blessings and the blessings of the Catholic community. Congratulating Shri Padmaraj Poojary on his appointment, Bishop Peter Paul Saldanha offered prayers for God's blessings upon him and wished him success in his new responsibility of serving the people of Dakshina Kannada. The Bishop also expressed his best wishes to Shri Poojary as he takes on the responsibility of leading



the District Congress. Rev. Fr Rupesh Madtha, PRO, Diocese of Mangalore, was present during the courtesy visit.The delegation accompanying Poojary included John B. Monteiro, Vice-President, DK District Congress Minority Unit and former President of RACHANA Catholic Chamber of Commerce and Industry, Mangaluru; Lawrence Dsouza, President, DK District Congress Labour Cell; Alwyn Prakash Sequeira, General Secretary, DK District Minority Unit; Melwyn Dsouza, former Zilla Panchayat Member; Nelson Monteiro, Member, Land Tribunal; Naveen Lobo, Member, Karnataka Konkani Sahitya Academy; Lancelot Pinto, former Corporator, Mangaluru City Corporation; and Christon Menezes, President, NSUI, Mangaluru South. Other prominent Congress leaders present included Alston Dcunha, Wilfred Monteiro, Pius Monteiro, Lancy Lasrado, Avitha Noronha, Neethu Dsouza, Mary Pinto, Rita Dsouza, Stanley Bantwal and Veena, among others. The meeting was held in a cordial atmosphere, with the Bishop conveying his blessings and best wishes to Padmaraj Poojary for his new responsibilities.

## Saint Agnes College Welcomes New MBA & MCA Batch with a Focus on Skills, Technology and Excellence

The Postgraduate Departments of MBA and MCA at Saint Agnes College (Autonomous), Mangaluru, inaugurated the new MBA and MCA Batch 2026–2028 at a programme held on October 6 at the Seminar Hall of the Mother Mary Aloysia Centenary Block. The inaugural programme marked the beginning of a new academic journey for the postgraduate students and provided an opportunity for parents to interact with the faculty and learn more about the institution's academic environment and expectations. Praveen Udupa, Founder and Technical Director, A1 Logics, Mangaluru, was the Chief Guest. Dr Mallika Shetty, Assistant Professor, Department of MBA, served as the Master of Ceremonies, while Mrs. Akshatha Shetty, Head of the Department of MCA, introduced the Chief Guest. Addressing the students, Praveen Udupa emphasised the importance of using technology effectively while developing analytical thinking, problem-solving skills and individual capabilities. He stressed that technology should be used as a tool to enhance human potential rather than replace it. He also urged parents to provide guidance and support to their children while allowing them to face challenges independently. Such an approach, he noted, would help students develop



resilience, confidence and the ability to handle challenges in life. Sr Dr M. Venissa A.C., Principal, Saint Agnes College (Autonomous), welcomed the new students and highlighted the qualities and attributes expected of graduates. She encouraged the students to make the most of their two years at the institution by developing themselves academically, professionally and personally, while living up to the expectations of their parents, society and the institution. The programme was attended by Sr Dr M. Vinora A.C., PG Coordinator; Chaco P. J., Dean of the MBA and MCA Departments; Sheryl Preethika, Head of the Department of MBA; and Akshatha Shetty, Head of the Department of MCA. Faculty members present included Dr Mallika Shetty and Joylene Lobo from the MBA Department and Panchajanyeswari M. Achar, Vaishnavi Shenoy and Sweedle Dsouza from the MCA Department. The inaugural programme also provided a platform for meaningful interaction among students, parents and faculty, helping establish a strong foundation for a supportive and purposeful postgraduate academic journey. The programme concluded with the vote of thanks proposed by Mrs. Sheryl Preethika,

